**PW- 1**

**ದಿನಾಂಕಃ 09-01-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ಆರ್.ಜೆ ಪಿ .ವಕೀಲರಿಂದಃ**

1. ಅಪಘಾತ ಆಗಿ 4 ವರ್ಷಗಳಾಗಿವೆ. ನಾನು ಅಪಘಾತ ಆಗುವ ಪೂರ್ವದಲ್ಲಿ ಚಿಕ್ಕಹರಳಳ್ಳಿಯಿಂದ ಕುರಿಗೆ ಮೇವು ತರಲು ಹೋಗಿದ್ದೆ. ನಾನು ಮೋಟರ್ ಸೈಕಲನಲ್ಲಿ ಹೋಗುತ್ತಿದ್ದೆ ಮೋಟರ್ ಸೈಕಲನ್ನು ನಾನೇ ಚಲಾಯಿಸುತ್ತಿದ್ದೆ. ಅಪಘಾತ ಮೋಟರ್ ಸೈಕಲ್ ಮತ್ತು ಟ್ರಾಕ್ಟರ್ ಮದ್ಯ ಆಗಿದೆ. ಟ್ರಾಕ್ಟರ್ ಕಿಂತ ಮೋಟರ್ ಸೈಕಲ್ ಸಾಮಾನ್ಯ ವಾಗಿ ವೇಗವಾಗಿಹೋಗುತ್ತದೆ ಎಂದರೆ ನಾನು ನಿದಾನವಾಗಿ ಹೋಗುತ್ತಿದೆ ಎಂದು ಹೇಳುತ್ತಾರೆ. ಅಪಘಾತ ರಸ್ತೆ ಮದ್ಯದಲ್ಲಿ ಆಗಿದೆ ಎಂದರೆ ನಾನು ರಸ್ತೆ ಎಡ ಬದಿಯಿಂದ ಹೋಗುತ್ತಿದ್ದೆ ಆತನ ಟ್ರಾಕ್ಟರನ್ನು ಜಮೀನಿಂದ ತೆಗೆದುಕೊಂಡು ಅಪಘಾತ ಆಗಿದೆ.

2. ನಿಪಿ-3 ರಲ್ಲಿ ಅಪಘಾತ ರಸ್ತೆ ಮದ್ಯದಲ್ಲಿ ಆಗಿದೆ ಎಂದು ತೋರಿಸಲಾಗಿದೆ ನನಗೆ ಆದ ನಂತರ ಮೋಟರ್ ಸೈಕಲನೊಂದಿಗೆ ನಾನು ರಸ್ತೆ ಮದ್ಯದಲ್ಲಿ ಬಿದಿದ್ದೆ ಎಂದು ಹೇಳುತ್ತಾರೆ. ಅಪಘಾತ ಆದ ನಂತರ ನನ್ನನ್ನು ಮಲೇಬೆನ್ನೂರು ಸರ್ಕಾರಿ ಆಸ್ಪತ್ರೆಗೆ ದಾಖಲಿಸಿದರು. ನಂತರ ದಾವಣಗೆರೆಯ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಅಲ್ಲಿನನಗೆ ಸರಿಯಾದ ಚಿಕಿತ್ಸೆ ಸಿಗದ ಕಾರಣ ನಾನು ಮಂಗಳೂರು ಎನ್ನಪೈ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ಹೋಗಿರುತ್ತೇನೆ. ಅಲ್ಲಿ ನನ್ನ ಕಾಲುಲಗೆ ಆಪರೆಷನ್ ಮಾಡಿರುತ್ತಾರೆ. ಅಲ್ಲಿ ತಪ್ಪಾಗಿದೆ ಎಂದು ಮತ್ತೊಂದು ಬಾರಿ ಆಪರೆಷನ್ ಮಾಡಿರುತ್ತಾರೆ. ಕಾಲಿನಲ್ಲಿ ಇರುವ ಮೂಳೆ ಪುಡಿ ಪುಡಿಯಾಗಿದ್ದರಿಂದ ಸ್ಪಂಟದಲ್ಲಿ ಇರುವ ಮೂಳೆ ತೆಗೆದು ಅಲ್ಲಿ ಕಸಿ ಮಾಡಿರುತ್ತಾರೆ. ನನಗೆ ಸಾದಾ ಸ್ವರೂಪದ ಗಾಯಗಳಾಗಿವೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ವೈದ್ಯಕೀಯ ಬಿಲ್ಲುಗಳನ್ನುಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**PW- 1**

3. ಈದಾದ ನಂತರ ನಾನು ರಾಣೇಬೆನ್ನೂರಿನ ಓಂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ . ಅದನ್ನು ಯಾವಾಗ ಪಡೆದಿದ್ದೆ ಎಂದು ದಿನಾಂಕ ಹೇಳಲು ಆಗುವುದಿಲ್ಲ. ನಾನು ಸಂಪೂರ್ಣವಾಗಿ ಗುಣಮುಖನಾಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಈಗಲೂ ಕೂಡ ಕೈಯಲ್ಲಿ ಕೋಲು ಹಿಡಿದುಕೊಂಡು ಬೇರೆಯವರ ಸಹಾಯದಿಂದ ಹೋಗಬೇಕಾಗುತ್ತದೆ. ಅಂಗನ್ಯೂನ್ಯತೆ ಪ್ರಮಾಣ ಪತ್ರ ಯಾವ ಆಸ್ಪತ್ರೆಯಲ್ಲಿ ಪಡೆದಿರುತ್ತೇನೆ ಎಂದು ನನಗೆ ನೆನಪಿಲ್ಲ. ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ಎನ್ ಪೈ ಆಸ್ಪತ್ರೆಯಿಲ್ಲಿ ಯಾಕೆ ಪಡೆದಿಲ್ಲ ಎಂಬ ಪ್ರಶ್ನೆಗೆ ತದ ನಂತರದಿಂದ ಚಿಕಿತ್ಸೆಯನ್ನು ಇಲ್ಲಿ ಪಡೆದಿದ್ದರಿಂದ ಇಲ್ಲಿಯೇ ತೆಗೆದುಕೊಂಡಿದ್ದೇನೆ ಎಂದು ಹೇಳುತ್ತಾರೆ. ಎನ್ ಪೈ ಆಸ್ಪತ್ರೆಯವರು ನನಗೆ ಕಡಿಮೆ ನ್ಯೂನ್ಯತೆ ಕೊಡುತ್ತಾರೆ ಎಂದು ತಿಳಿದು ನಾನು ಓಂ ಆಸ್ಪತ್ರೆಯಲ್ಲಿ ಹೆಚ್ಚಿನ ಅಂಗನ್ಯೂನ್ಯತೆ ಪ್ರಮಾಣ ಪತ್ರ ಪಡೆದಿರುತ್ತೇನೆ ಎಂದರೆ ಸರಿಯಲ್ಲ.

4. ಅಪಘಾತ ನನ್ನ ತಪ್ಪಿನಿಂದ ಸಂಭವಿಸಿದೆ ಎಂದರೆ ಸರಿಯಲ್ಲ. ಅಪಘಾತ ನನ್ನ ತಪ್ಪಿನಿಂದ ಆಗಿದೆ ಎಂಬ ಕಾರಣಕ್ಕಾಗಿ ನನ್ನನ್ನು ಅಂತಿಮ ವರದಿಯಲ್ಲಿ ಆರೋಪಿ ನಂ. 2 ಎಂದು ತೋರಿಸಲಾಗಿದೆ ಎಂದರೆ ನನ್ನ ತಪ್ಪು ಇಲ್ಲ ಎಂದು ಹೇಳುತ್ತಾರೆ. ಅಪಘಾತದ ಸಮಯದಲ್ಲಿ ನನಗೆ ಚಾಲನಾ ಪ್ರಮಾಣ ಪತ್ರ ಮತ್ತು ನನ್ನ ವಾಹನಕ್ಕೆ ವಿಮಾ ಪಾಲಸಿ ಇದ್ದಿರಲಿಲ್ಲ ಎಂದರೆ ನಿಜ. ಅಪಘಾತ ನನ್ನ ತಪ್ಪಿನಿಂದ ಸಂಭವಿಸಿದ್ದರಿಂದ ನಾನು ಯಾವುದೇ ಪರಿಹಾರಕ್ಕೆ ಯೋಗ್ಯನಲ್ಲ ಎಂದರೆ ಸರಿಯಲ್ಲ. ಅಪಘಾತದಿಂದ ಮೂಳೆ ಮುರಿತದ ಗಾಯ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಪ್ರಮಾಣದ ಪರಿಹಾರ ಪಡೆಯಲು ಸುಳ್ಳು ದಾಖಲೆಯನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**PW- 1**

5. ನನಗೆ ಈಗ 35 ವರ್ಷ ವಯಸ್ಸು ಎಂದರೆ ಸರಿಯಲ್ಲ. 25 ವರ್ಷ ಎಂದು ಹೇಳುತ್ತಾರೆ. ನನ್ನ ವಯಸ್ಸು ತೋರಿಸಲು ಆದಾರ ಕಾರ್ಡನ್ನು ಹಾಕಿರುತ್ತೇನೆ. ನಾನು ಮೊದಲು ಕೂಲಿ ಕೆಲಸ ಮತ್ತು ಕುರಿ ಸಾಕಾಣಿಕೆ ಕೆಲಸ ಮಾಡುತ್ತಿದ್ದೆ. ತಿಂಗಳಿಗೆ 25 ಸಾವಿರ ಮೊದಲು ದುಡಿಯುತ್ತಿದ್ದೆ ಈಗ ಏನು ಆದಾಯ ಇಲ್ಲ. 25 ಸಾವಿರ ಆದಾಯ ಬರುತ್ತಿತ್ತು ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ. ನಾನು 5 ಲಕ್ಷ ಹಣ ಚಿಕಿತ್ಸೆಗೆ ಖರ್ಚು ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮುಂದಿನ ಚಿಕಿತ್ಸೆಗಾಗಿ ಇನ್ನು 2 ವರೆ ಲಕ್ಷ ಅವಶ್ಯಕತೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಪೌಷ್ಠಿಕ ಆಹಾರ ಮತ್ತು ಓಡಾಟಕ್ಕಾಗಿ 60 ಸಾವಿರು ರೂ ಖರ್ಚು ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈಗ ನನ್ನ ದಿನನಿತ್ಯದ ಕೆಲಸವನ್ನು ನಾನೇ ಮಾಡಿಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ನನ್ನ ತಪ್ಪಿನಿಂದ ಆಗಿದ್ದರಿಂದ ಸಂಪೂರ್ಣ ಪರಿಹಾರ ಕೊಡಲು ಎದುರುದಾರರು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ನಾನು ಎದುರುದಾರರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೂರು ಕೊಟ್ಟ ದಿನಾಂಕ ನನಗೆ ನೆನಪಿಲ್ಲ. ದೂರನ್ನು ಗುಡ್ಡಪ್ಪ ಕೊಟ್ಟಿರುತ್ತಾನೆ. ದೂರನ್ನು 5 ದಿನ ತಡವಾಗಿ ಕೊಟ್ಟಿದ್ದು ಕಾರಣ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಕೊಳ್ಳುತ್ತಿದ್ದೆ. ಅಪಘಾತ ನನ್ನ ತಪ್ಪಿನಿಂದ ಆಗಿದ್ದರಿಂದ ನಾನು ದೂರು ಕೊಡಲು ಹೋಗಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

**(ಓ.ಹೇ.ಕೇ.ಸ.)**

3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಜೆಎಂಎಫಸಿ, ರಾಣೆಬೆನ್ನೂರ.

ಸಾಕ್ಷಿದಾರರ ಸಹಿಃ